- **ಕೈಮಗ್ಗ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಒದಗಿಸುವುದು**

ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಹಳೆಯ ಯಾಂತ್ರಿಕ ಜಕಾರ್ಡ್‌ಗಳ ಬದಲಾಗಿ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಬಳಸುವುದರಿಂದ ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 90 ರಷ್ಟು ಸಹಾಯಧನವನ್ನು ಒದಗಿಸುವುದು.

- **ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ. ಗೆ ರೂ.15/– ರ ಸಹಾಯಧನ ನೀಡುವುದು**

ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿ ಗೆ ರೂ.15/– ರ ಸಹಾಯಧನವನ್ನು ನೀಡಲಾಗುವುದು.

## ವಿಶೇಷ ಯೋಜನೆಗಳು

- **Smart Handloom Innovation Centre (SHIC)**

ರಾಷ್ಟ್ರೀಯ ವಿನ್ಯಾಸ ಸಂಸ್ಥೆ ಬೆಂಗಳೂರು (NID) ಇವರ ಮೂಲಕ ರೂ. 155.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲಾಗಿದೆ.

- **ನೈಸರ್ಗಿಕ ಬಣ್ಣಗಾರಿಕೆಯ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಕೇಂದ್ರ**

ದೇಶಿಯ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ನೈಸರ್ಗಿಕ ಬಣ್ಣ ಹಾಕಿದ ಸಿದ್ದ ಉಡುಪುಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನೈಸರ್ಗಿಕ ಬಣ್ಣಗಾರಿಕೆಯ ತಂತ್ರಜ್ಞಾನ ಅಳವಡಿಸಿಕೊಂಡು ಕೈಮಗ್ಗ ಉತ್ಪನ್ನಗಳನ್ನು ಉತ್ಪಾದಿಸಲು ಮೆ: ದೇಸಿ ಸಂಸ್ಥೆಯ ಸಹಯೊಗದೊಂದಿಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೊನ್ನೆಸರ ಗ್ರಾಮದಲ್ಲಿ ರೂ.33.00 ಲಕ್ಷಗಳ ಸರ್ಕಾರದ ಅನುದಾನದಲ್ಲಿ ಸ್ಥಾಪಿಸಲಾಗಿದೆ.

- **ಆಗಸ್ಟ್ 7 ರಂದು ಕೈಮಗ್ಗ ದಿನಾಚರಣೆ ಅಚರಿಸಲಾಗುವುದು**

- **E– ಮಾರ್ಕೆಟಿಂಗ್**

ಕೈಮಗ್ಗ ಉತ್ಪನ್ನಗಳಿಗೆ ಇ– ಮಾರುಕಟ್ಟೆ ಸೌಲಭ್ಯ ಒದಗಿಸಿ ನೇಕಾರರಿಗೆ ತಮ್ಮ ಉತ್ಪಾದನೆಗೆ ಗರಿಷ್ಠ ಮಾರುಕಟ್ಟೆ ಬೆಲೆಯನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸಲು ಕ್ರಮವಹಿಸಲಾಗುತ್ತಿದೆ. ಇದರಿಂದ ಮಧ್ಯವರ್ತಿಗಳನ್ನು ತಡೆಗಟ್ಟಿ ನೇಕಾರರು ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕವನ್ನು ಸಾಧಿಸಲು ಇಲಾಖೆಯು Facilitator ಆಗಿ ಕಾರ್ಯನಿರ್ವಹಿಸಲಿದೆ.

- **GI ಉತ್ಪನ್ನಗಳು**

ರಾಜ್ಯದ ಈ ಕೆಳಕಂಡ GI ಉತ್ಪನ್ನಗಳಿಗೆ ಹೆಚ್ಚಿನ ಪ್ರಚಾರವನ್ನು ನೀಡಿ ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸಲು ಹಾಗೂ ಈ ಉತ್ಪಾದನೆ ರಂಗಕ್ಕೆ ಯುವ ನೇಕಾರರನ್ನು ಆಕರ್ಷಿಸಲು ವಿ.ಟಿ.ಪಿ.ಸಿ ಸಂಸ್ಥೆಯ ಸಹಯೋಗದೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

  - ಮೊಳಕಾಲ್ಮೂರು ಸೀರೆ
  - ಇಳಕಲ್ ಸೀರೆ
  - ಗುಳೇದಗುಡ್ಡ ಖಣ
  - ಉಡುಪಿ ಸೀರೆ


- **ಕೈಮಗ್ಗ ಕ್ಲಸ್ಟರ್**

ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ನೇಕಾರರ ಸೇವಾ ಕೇಂದ್ರದ ಮೂಲಕ ಈ ಕೆಳಗಿನ ಕೈಮಗ್ಗ ಸಾಂದ್ರತೆಯ ಪ್ರದೇಶಗಳಲ್ಲಿ ಕೈಮಗ್ಗ ಕ್ಲಸ್ಟರ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

| ಕ್ಲಸ್ಟರ್ | ಜಿಲ್ಲೆ | ಮಂಜೂರಾದ ವರ್ಷ |
|---|---|---|
| ಹುನಗುಂದ ಕೈಮಗ್ಗ ಕ್ಲಸ್ಟರ್ | ಬಾಗಲಕೋಟೆ | 2016–17 |
| ಚಾಮರಾಜನಗರ ಕೈಮಗ್ಗ ಕ್ಲಸ್ಟರ್ | ಚಾಮರಾಜನಗರ | 2016–17 |
| ಅಮೀನಗಡ ಕೈಮಗ್ಗ ಕ್ಲಸ್ಟರ್ | ಬಾಗಲಕೋಟೆ | 2018–19 |
| ಯಲಹಂಕ ಕೈಮಗ್ಗ ಕ್ಲಸ್ಟರ್ | ಬೆಂಗಳೂರು ನಗರ | 2018–19 |
| ಹೊನ್ನಾಳಿ ಕೈಮಗ್ಗ ಕ್ಲಸ್ಟರ್ | ಕಲಬುರಗಿ | 2018–19 |
| ಕಿನ್ನಾಳ ಕೈಮಗ್ಗ ಕ್ಲಸ್ಟರ್ | ಕೊಪ್ಪಳ | 2018–19 |
| ನಾಗರಾಳ ಕೈಮಗ್ಗ ಕ್ಲಸ್ಟರ್ | ಬಾಗಲಕೋಟೆ | 2018–19 |

**ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು**
**ಕೈಮಗ್ಗ ಮತ್ತು ಜವಳಿ ಇಲಾಖೆ**
ನಂ. 86, 1 ಮತ್ತು 2ನೇ ಮಹಡಿ, "ಶುಭೋದಯ ಸಂಕೀರ್ಣ",
ರೈಲ್ವೆ ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ,
ಬೆಂಗಳೂರು–560020.
ದೂರವಾಣಿ ಸಂಖ್ಯೆ: 08023561628, 23568228,
23568223, 23564829 ಫ್ಯಾಕ್ಸ್: 080–23566082
ಇ–ಮೇಲ್: texcomgok@gmail.com
ವೆಬ್: www.karnatakadht.org
07-08-2019

# ಕೈಮಗ್ಗ ಮತ್ತು ಜವಳಿ ಇಲಾಖೆ ಪ್ರಮುಖ ಯೋಜನೆಗಳು



# ಕೈಮಗ್ಗ

**ಜವಳಿ ಅಭಿವೃದ್ಧಿ ಆಯುಕ್ತರು**
**ಹಾಗೂ ನಿರ್ದೇಶಕರು**
**ಕೈಮಗ್ಗ ಮತ್ತು ಜವಳಿ ಇಲಾಖೆ**



- **ಕೈಮಗ್ಗ ನೇಕಾರರಿಗೆ ತರಬೇತಿ (ಸ್ಟೈಫಂಡ್)**

ವೆಂಕಟಗಿರಿಕೋಟೆ, ಸೇಲಂ ಹಾಗೂ ಕಣ್ಣೂರು ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯಲ್ಲಿ ಡಿಪ್ಲೋಮಾ ವಿದ್ಯಾಭ್ಯಾಸ ಮಾಡುತ್ತಿರುವ ಕರ್ನಾಟಕದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿಸಲಾಗುವುದು.

- **ಮೃತ ನೇಕಾರರ (ಕೈಮಗ್ಗ) ಅಂತ್ಯ ಸಂಸ್ಕಾರದ ವೆಚ್ಚ ಮರುಪಾವತಿ**

ಕೈಮಗ್ಗ ನೇಕಾರರ ಸಹಕಾರಿ ಸಂಘದ ನೇಕಾರ ಸದಸ್ಯರು ಮರಣ ಹೊಂದಿದಲ್ಲಿ ಅಂತಹ ಕುಟುಂಬದ ಸದಸ್ಯರಿಗೆ ರೂ. 5,000/– ಗಳನ್ನು ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ನೀಡಲಾಗುವುದು. ಈ ಹಣವನ್ನು ಮೊದಲು ಸದಸ್ಯತ್ವ ಹೊಂದಿದ ಸಹಕಾರಿ ಸಂಘದವರು ಮರಣ ಹೊಂದಿದ ನೇಕಾರರ ಕುಟುಂಬದವರಿಗೆ ಬಿಡುಗಡೆ ಮಾಡಿ ನಂತರ ಹಣವನ್ನು ಸರ್ಕಾರದಿಂದ ಮರುಸಂದಾಯ ಪಡೆಯಬಹುದು.

- **ನೇಕಾರರ ವೈದ್ಯಕೀಯ ವೆಚ್ಚ ಮರುಪಾವತಿ**

ನೇಕಾರರ ಹೃದಯ, ಕಿಡ್ನಿ ಮತ್ತು ಕ್ಯಾನ್ಸರ್‌ಗಳಿಗೆ ಸಂಬಂಧಿಸಿದ ಕಾಯಿಲೆಗಳಿಗೆ ವೆಚ್ಚ ಮಾಡಿದ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಒದಗಿಸಲಾಗುವುದು. ಗರಿಷ್ಠ ರೂ.50,000/– ಗಳು ಭರಿಸಲಾಗುವುದು.

- **ನಬಾರ್ಡ್ ಪುನರ್‌ಧನ ಯೋಜನೆಯಡಿ ಬಡ್ಡಿ ಸಹಾಯಧನ**

ನೇಕಾರ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮೂಲಕ ನಬಾರ್ಡ್ ಪುನರ್‌ಧನ ಯೋಜನೆಯಡಿ ದುಡಿಮೆ ಬಂಡವಾಳಕ್ಕಾಗಿ ಪಡೆಯುವ ಸಾಲದ ಮೇಲೆ ಶೇ. 3 ರ ಬಡ್ಡಿ ಸಹಾಯಧನವನ್ನು ಇಲಾಖಾ ವತಿಯಿಂದ ನೀಡಲಾಗುತ್ತಿದೆ.

- **ಹೊಸ ವಿನ್ಯಾಸ ಮತ್ತು ಪ್ರವೃತ್ತಿ (ಪ್ರವಾಸ)**

ಮಾರುಕಟ್ಟೆ ಬದಲಾವಣೆಗಳಿಗನುಸಾರವಾಗಿ ಹೊಸ ಮಾದರಿಯ ವಿನ್ಯಾಸಗಳ ಬಗ್ಗೆ ಅರಿವನ್ನು ಮೂಡಿಸಲು ನೇಕಾರರ ಸಹಕಾರ ಸಂಘಗಳ ನೇಕಾರರಿಗೆ ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಪ್ರವಾಸ ಏರ್ಪಡಿಸಲು ರೂ. 50,000/– ಗಳ ಅನುದಾನ ನೀಡಲಾಗುವುದು.

- **ಮಿತವ್ಯಯ ನಿಧಿ ಯೋಜನೆ**

ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತ ಶೇಕಡ 12ರ ಬಡ್ಡಿಯನ್ನು ನೀಡಲಾಗುವುದು. ಈ ಯೋಜನೆಯ ಮೊಬಲಗಿನಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ.

- **ಸಹಕಾರ ಬ್ಯಾಂಕ್‌ಗಳು ನೀಡಿದ 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ**

ನೇಕಾರರ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಪಟ್ಟಣ ಸಹಕಾರ ಬ್ಯಾಂಕ್‌ಗಳಿಂದ ರೂ.2.00 ಲಕ್ಷಗಳ ವರೆಗೆ ಶೇಕಡ 1ರ ಬಡ್ಡಿ ದರದಲ್ಲಿ ಸಾಲ ಹಾಗೂ ರೂ. 2.00 ಲಕ್ಷಗಳಿಂದ ರೂ. 5.00 ಲಕ್ಷಗಳ ವರೆಗೆ ಶೇಕಡ 3ರ ಬಡ್ಡಿ ದರದಲ್ಲಿ ನೀಡಿದ ಸಾಲಕ್ಕೆ ರಾಜ್ಯ ಸರ್ಕಾರವು ಬಡ್ಡಿ ಸಹಾಯಧನ ನೀಡಲಾಗುವುದು.

- **ನೇಕಾರರ ಸಾಲ ಮನ್ನಾ**

ಸರ್ಕಾರದ ಆದೇಶ ಸಂಖ್ಯೆ ವಾಕೈ 57 ಜಕೈಯೋ 2017 ಬೆಂಗಳೂರು, ದಿನಾಂಕ: 13.12.2017, 29.01.2018, 20.02.2018 ಮತ್ತು 24.03.2018 ರ ಆದೇಶಗಳನ್ವಯ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘ / ಸಂಸ್ಥೆಗಳಿಂದ ಸಾಲ ಪಡೆದು ಹೊರಬಾಕಿ ಹೊಂದಿರುವ (ಅಸಲು ಮತ್ತು ಬಡ್ಡಿ ಸೇರಿ) ರೂ. 50,000/– ಗಳ ವರೆಗಿನ ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

- **ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ. 20 ರಿಬೇಟ್ ಯೋಜನೆ**

2018–19 ನೇ ಸಾಲಿನಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ) ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇಕಡ 20 ರಿಬೇಟ್‌ನ್ನು ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುವುದು.

- **ಕೈಮಗ್ಗ ವಿಕಾಸ ಯೋಜನೆ**

ರಾಜ್ಯದ ಕೈಮಗ್ಗ ವಲಯದಲ್ಲಿ ಕೈಮಗ್ಗಗಳು ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಲಿ ಇರುವ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಮುಂದುವರಿಸಿ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಯುವ ನೇಕಾರರನ್ನು ಕೈಮಗ್ಗ ನೇಯ್ಗೆ ವೃತ್ತಿಯೆಡೆಗೆ ಆಕರ್ಷಿಸುವ ಉದ್ದೇಶದಿಂದ ಹತ್ತಿ / ರೇಷ್ಮೆ / ಉಣ್ಣೆ ಕ್ಷೇತ್ರದಲ್ಲಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50ರಷ್ಟು ಸಹಾಯಧನ ಒದಗಿಸುವುದು.

- **ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ**

ಕೈಮಗ್ಗ ನೇಕಾರರ ಸಹಕಾರ ಸಂಘಗಳು ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿ ಸಾಲ ಎತ್ತುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಸಂಘದ ಉತ್ಪಾದನಾ ಮತ್ತು ಮಾರಾಟ ಚಟುವಟಿಕೆಗಳ ವಹಿವಾಟನ್ನು ಅಭಿವೃದ್ಧಿಪಡಿಸಲು ಆವರ್ತಕ ನಿಧಿಯನ್ನು ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಹಿಂದಿನ 3 ವರ್ಷಗಳ ಸರಾಸರಿ ವಹಿವಾಟಿನ ಮೇಲೆ ಶೇ. 50 ರಷ್ಟನ್ನು ರೂ. 5.00ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು ನೀಡಲಾಗುವುದು.

- **ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು**

ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ನೇಕಾರರ ಹೆಚ್ಚಿನ ಪರಿಶ್ರಮವನ್ನು ತಪ್ಪಿಸಿ ಹೆಚ್ಚಿನ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುಕೂಲವಾಗುವಂತೆ **ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್** ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 90ರಷ್ಟು ಸಹಾಯಧನವನ್ನು ಒದಗಿಸುವುದು.